ಸಿಸಿ **ಸಂಃ 1073/2025** ಪಿ ಡಬ್ಲ್ಯೂ **1**

**ದಿನಾಂಕಃ 21.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ**

ಉಡುಪಿಯಲ್ಲಿ 15ವಃ ದಿಂದ ವಾಸ ಮಾಡಿಕೊಂಡಿರುತ್ತೇನೆ. ನಾನು ಉಡುಪಿಯಲ್ಲಿ ಖಾಯಂ ವಾಸವಾಗಿಲ್ಲ ಬೊಂಬೆಗೆ ಹೋಗಿ ಬರುವ ಕ್ರಮ ಹೊಂದಿರುತ್ತೇನೆ. ನನ್ನ ಕುಟುಂಬದವರು ಬೊಂಬೆಯಲ್ಲಿ ವಾಸ ಮಾಡಿಕೊಂಡಿರುತ್ತಾರೆ. ಮೃತರು ನನ್ನ ಹೆಡಂತಿ ತಂಗಿ ಆಗಿರುತ್ತಾರೆ. ಅವರಿಗೆ ಮದುವೆ ಆಗಿರಲಿಲ್ಲ. ಅವರ ಕೊಂಚಾಡಿಯಲ್ಲಿ ವಾಸ ಮಾಡಿಕೊಂಡಿದ್ದರು. ಅವರ ಜೊತೆ ಅವರ ತಂಗಿಯಾದ ಇವೆಂಟ್ ಮತ್ತು ಮೀನ ವಾಸ ಮಾಡಿಕೊಂಡಿದ್ದರು. ನನ ಹೆಂಡತಿ ಹೆಸರು ರೈನಾ ಬಂಗೇರ ಆಗಿರುತ್ತದೆ. ನನ್ನ ಹೆಂಡತಿ ಮತ್ತು ಮೃತರ ಇಬ್ಬರು ತಂಗಿ ಸೇರಿಕೊಂಡು ಪರಿಹಾರಕ್ಕಾಗ ಕೇಸು ದಾಖಲು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಆ ಕೆಸೀನಲ್ಲಿ ನನ ಹೆಡಂತಿ ವಿಳಾಸವನ್ನು ಉಡುಪಿ ಎಂದು ತೋರಿಸಲಾಗಿದೆ ಎಂದರೆ ಗೊತ್ತಿಲ್ಲ. ನನಗೆ ಪರಿಹಾರದ ಅರ್ಜಿ ಬಗ್ಗೆ ಮಾಹಿತಿ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಅಪಘಾತದಲ್ಲಿ ಮೃತಪಟ್ಟ ಬಗ್ಗೆ ಬೆಃ 7 ರಿಂದ 8 ರ ನಡುವೆ ನನ್ನ ಮಗನಾದ ರೊಯ್ ಡನ್ ನಿಂದ ತಿಳಿದು ಬಂದಿರುತ್ತದೆ. ಅವರು ಬಾಂಬೆಯಲ್ಲಿ ವಾಸವಾಗಿರುತ್ತಾರೆ. ಉಡುಪಿಯಿಂದ 8.30ಕ್ಕೆ ಹೊರಟಿರುತ್ತೆವೆ. ಮಂಗಳೂರಿಗೆ ಬರಲು ಸುಮಾರು 10.30 ಆಗಿರುತ್ತದೆ. ಕೂಡಲೇ ನಾವು ಮೃತರ ಮನೆಗೆ ಹೋಗಿರುತ್ತೇವೆ. ಮನೆಯಿಂದ ಆಸ್ಪತ್ರೆಗೆ ಮದ್ಯಾಹ್ನ 1 ರಿಂದ 1.30ಕ್ಕೆ ಹೋಗಿರುತ್ತೇವೆ. ಮಎತರ ಜೊತೆ ಇದ್ದ ತಂಗಿಯರಿಗೆ ದೂರುಕೊಡುವಂತೆ ನಾನು ತಿಳಿಸಲಿಲ್ಲ.

ನನಗೆ ಕನ್ನಡ ಓದಲುಬರೆಯಲು ಬರುವುದಿಲ್ಲ. ಪೋಾಲಿಸರು ತಿಳಿಸಿದಂತೆ ದೂರನ್ನು ತಯಾರು ಮಾಡಲಾಗಿರುತ್ತದೆ. ಪೊಲೀಸರು ತಿಳಿಸಿದಂತೆ ವಿಲ್ಮಾ ರವರು ದೂರು ಬರೆದಿರಬಹುದು ಎಂದರೆ ಇರಬಹುದು. ದೂರಿಗೆ ಅವರ ಸಹಿ ಪಡೆದಿಲ್ಲ. ಅಪಘಾತವನ್ನು ನಾನು ನೋಡಿರುವುದಿಲ್ಲ. ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿರುವುದಿಲ್ಲ. ಅಪಘಾತಪಡಿಸಿದ ವ್ಯಕ್ತಿಯನ್ನು ಸಹ ನಾನು ನೋಡಿರುವುದಿಲ್ಲ. ಪೊಲಿಸರು ತಿಳಿಸಿದ ಮೇರೆಗೆ ಅಪಘಾತಪಡಿಸಿದ ವ್ಯಕ್ತಿ ಬಗ್ಗೆ ತಿಳಿದು ಬಂತು. ಶ ಮಹರ ನ ಮಾಡಲು ಮದ್ಯಾಹ್ನ 1.30 ರಿಂದ 2 ಗಗಂಟೆಗೆ ಹೋಗಿರುತ್ತೇನೆ. ಮಎತರ ಗುರುತಿಸಿದ ಬಗ್ಗೇ ಸಹಿ ಮಾಡಿರುತ್ತೇನೆ. ಶವ ಮಹಜರ್ ತೋರಿಸಿದ್ದು ಸಾಕ್ಷಿ ಅವರ ಸಹಿ ಇಲ್ಲ ಎಂದು ನುಡಿಯುತ್ತಾರೆ. ಶವ ಮಹರಜ್ ್ನು ಸಹ ಕನ್ನಡದಲ್ಲಿ ಮಾಡಲಾಗಿದೆ ಎಂದರೆ ಸರಿ. ಅದರಲ್ಲಿ ಇರುವ ಅಂಶದ ಬಗ್ಗೆ ನನಗೆ ಗೊತ್ತಿಲ್ಲ. ಮೃತರ ನಿರ್ಲಕ್ಷತೆಯಿಂದ ರಸ್ತೆ ದಾಟುವ ಸಮಯ ಅಪಘಾತವಾಗಿದು ಇದ್ದ ಬಗ್ಗೆ ನನಗೆ ಮಾಹತಿ ಇದೆ ಎಂದರೆ ಸರಿಯಲ್ಲ ಅಪಘಾತಕ್ಕೆ ಬೈಕ್ ಸವಾರ ತಪ್ಪಿಲ್ಲ ಎಂದು ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಪರಿಹಾರದ ಹಣ ಪಡೆಯಲು ಹೆಂಡತಿ ಮೂಖಾಂತರ

ಅರ್ಜಿ ಸಲ್ಲಿಸಲು ಆರೋಪಿ ವಿರುದ ಸುಳ್ಳು ಕೇಸು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

ಜೆ.ಎಮ್.ಎಫ್ .ಸಿ (6ನೇ ನ್ಯಾಯಾಲಯ)